## ಬದುಕುವ ಛಲ!

ಧಾವಂತದ ಈ ಕಾಲದಲ್ಲಿ ಕ್ಷಣಕ್ಷಣಕ್ಕೂ ಜೀವನೋತ್ಸಾಹ ಕ್ಷೀಣಿಸುವ ಪರಿಸ್ಥಿತಿ ಇದೆ! ಹಾಗಾಗಿ 55–60 ವರ್ಷ ದಾಟಿದ ಕೆಲವರು ಸಾಮಾನ್ಯವಾಗಿ 'ಅಯ್ಯೋ... ನಮ್ದೇನೈತ್ರೀ..ಊರು ಹೋಗಂತೈತಿ, ಕಾಡು ಬಾ ಅಂತೈತೀ...' ಎಂದು ನಿರುತ್ಸಾಹ ತೋರುವುದುಂಟು!

ಇದು ಜೀವನದ ಅರ್ಧ ಆಯಸ್ಸು ಅನುಭವಿಸಿದವರ ಗೋಣಗಾಟವಾದರೆ ಇನ್ನು ಹರೆಯದವರು ತಮ್ಮ ವೈಫಲ್ಯವನ್ನು ನಕಾರಾತ್ಮಕವಾಗಿ ತೆಗೆದುಕೊಂಡು ಜೀವನವನ್ನೇ ಕೊನೆಗಾಣಿಸುವ ಹಂತಕ್ಕೂ ಹೋಗುವುದುಂಟು. ಇಂಥವರ ದ್ವಂದ್ವ, ಅಜ್ಞಾನಗಳಿಗೆ ಪ್ರಕೃತಿಯೇ ತೋರಿಸಿರುವ ಉತ್ತರವೊಂದು ಇಲ್ಲಿದೆ ನೋಡಿ. ಬೃಹತ್ ಬಂಡೆಯ ಸಣ್ಣ ಸೀಳಿನಲ್ಲಿಯೇ ತನ್ನ ಬದುಕನ್ನು ಕಂಡುಕೊಂಡು ಬೆಳೆಯುತ್ತಿರುವ ಪರಿಯನ್ನು ಕಣ್ಣಾರೆ ಕಂಡ ಮೇಲಾದರೂ ಬದುಕಿನ ಭವಿಷ್ಯದ ಬಗ್ಗೆ ಸಕಾರಾತ್ಮಕ ನಿಲುವನ್ನು ಬದಲಾಯಿಸಿಕೊಳ್ಳಬೇಕಾದುದು ಜಾಣತನವಲ್ಲವೇ?

—ಚನ್ನಬಸವ ಪುತ್ತೂರ, ಚಿತ್ರದುರ್ಗ





## ಭವಿಷ್ಯದ ಚಿಟ್ಟೆ

ಈ ಚಿತ್ರಗಳಲ್ಲಿ ಇರುವ ಜೀವಿಗಳನ್ನು ಅಪರೂಪಕ್ಕಾದರೂ ಕಂಡಿರುವಿರಾ? ಪ್ರಕೃತಿಯ ಮಡಿಲಲ್ಲಿ ಹಲವು ವೈಚಿತ್ರಗಳು ಕಣ್ಣಿಗೆ ಬೀಳುತ್ತಿರುತ್ತವೆ. ಹಾಗೆಯೇ ಇದು ಒಂದು ಜಾತಿಯ ಚಿಟ್ಟೆಯ ಜೀವನಚಕ್ರದ ಎರಡು (ಕ್ಯಾಟರ್ ಪಿಲ್ಲರ್ ಹಾಗೂ ಪ್ಯೂಪ) ಹಂತಗಳು. ಸ್ವಾತಿ ಆನೆಕಾರ್ ಅವರು ತಮ್ಮ ಕ್ಯಾಮೆರಾ ಕಣ್ಣಲ್ಲಿ ಸೆರೆಹಿಡಿದಿದ್ದಾರೆ. ಇವುಗಳ ಪ್ರತಿ ಹಂತದ ಬೆಳವಣಿಗೆಯನ್ನು ಕೌತುಕದಿಂದ, ತಾಳ್ಮೆಯಿಂದ ಕಾಯ್ದು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಮೊಟ್ಟೆಯಿಂದ ಚಿಟ್ಟೆಯಾಗುವ ಕಠಿಣ ಹಾದಿಯ ನಡುವಿನ ಚಿತ್ರಣ ಇಲ್ಲಿದೆ.

—ಅಶ್ವಿನಿ ಮೂರ್ತಿ ಅಯ್ಯನಕಟ್ಟೆ

## ಬಂಬಿನೊಳು ಜೀವಸಂಚಾರ

ಹೊಲಗಳಲ್ಲಿ ಬಳಸುವ ಪಂಪ್ ಸೆಟ್ ಮೋಟಾರ್‌ಗಳ ಮೇಲು ಹೊದಿಕೆ ಅತ್ಯಂತ ದಪ್ಪನೆಯ ರಟ್ಟಿನಿಂದ ಮಾಡಲಾಗಿರುತ್ತದೆ. ಹೊಸ ಪಂಪ್ ಸೆಟ್ ಮೋಟಾರ್ ತಂದಾಗ ಇಲ್ಲವೇ ಹಳೆಯ ಮೋಟಾರನ್ನು ದುರಸ್ತಿ ಮಾಡಿಸಿಕೊಂಡು ಬಂದಾಗ ಅದನ್ನು ಈ ದಪ್ಪನೆಯ ರಟ್ಟಿನಿಂದ ಮುಚ್ಚಿರಲಾಗುತ್ತದೆ. ಇಂತಹ ಬಲಿಷ್ಠ ಕೊಳವೆಗಳನ್ನು ಎಲ್ಲೆಂದರಲ್ಲಿ ಬಿಸಾಡುವುದನ್ನು ಕಂಡು ಇವುಗಳನ್ನು ಪರಿಸರಕ್ಕೆ ಪೂರಕವಾಗಿ ಬಳಸಬಹುದೇ ಎಂದು ಯೋಚಿಸಿದೆ. ಅದರಂತೆ ಒಂದು ಕೊಳವೆಯನ್ನು ಎರಡಾಗಿ ಕತ್ತರಿಸಿ ಎರಡೂ ಬದಿಯನ್ನು ಮುಚ್ಚಿದೆ. ಕೊಳವೆಯ ಮೇಲ್ಭಾಗದಲ್ಲಿ ಒಂದು ರಂಧ್ರ ಕೊರೆದು 'ಕೃತಕ ಗೂಡು' ತಯಾರಿಸಿ ಮರಗಳಿಗೆ ಕಟ್ಟಿದೆ. ನನ್ನ ಪ್ರಯತ್ನ ಫಲ ಕೊಟ್ಟಿತು, ಮೈನಾ ಮತ್ತು ಚಂದ್ರಮುಕುಟ ಹಕ್ಕಿಗಳು ಗೂಡಿನಲ್ಲಿ ಸಂತಾನೋತ್ಪತ್ತಿ ಆರಂಭಿಸಿದವು. ಇದೇ ರೀತಿಯ ಸುಮಾರು 30 ಗೂಡುಗಳನ್ನು ತಯಾರಿಸಿ ಮರಗಳಿಗೆ ಕಟ್ಟಿದೆ. ಒಮ್ಮೆ ಕಟ್ಟಿದ ಗೂಡು ಕನಿಷ್ಠ ಮೂರು ವರ್ಷ ಮಳೆ, ಗಾಳಿ, ಬಿಸಿಲನ್ನು ಎದುರಿಸಿ ಬಾಳಿಕೆ ಬರುತ್ತದೆ. ಮೈನಾ, ಚಂದ್ರಮುಕುಟ, ಬೈತಲೆ ಬಸವಿ, ಮಡಿವಾಳ, ಗಿಣಿ , ನೀಲಕಂಠ (ರಾಜ್ಯಪಕ್ಷಿ) ಮುಂತಾದ ಪಕ್ಷಿಗಳು ಯಶಸ್ವಿಯಾಗಿ ಸಂತಾನೋತ್ಪತ್ತಿ ನಡೆಸಿ ಹಾರಿಹೋದವು.

—ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ





